ದಿನಾಂಕಃ 09/10/2023 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಮುಂ. ಪಾಟೀ ಸವಾಲುಃ 2 ಮತ್ತು 6 ನೇ ಪ್ರತಿವಾದಿಗಳ ಪರ ಶ್ರೀ ಸಿ ಎಮ್ ಕೆ ವಕೀಲರಿಂದಃ**

6. ನನ್ನ ಚಿಕ್ಕಪ್ಪ ಚನ್ನಪ್ಪ ತೀರಿಕೊಂಡ ದಿನಾಂಕ, ತಿಂಗಳು ಮತ್ತು ಇಸ್ವೀ ಹೇಳಲು ಆಗುವುದಿಲ್ಲ. ಸದರಿಯವರು ಮೃತ ಪಡುವ 1 ತಿಂಗಳ ಹಿಂದೆ ಕಿಡ್ನಿ ಸಮಸ್ಯೆಯಿಂದ ಬಳಲುತ್ತಿದ್ದರು. ಆದರೆ ಆತ ಎಲ್ಲರ ಜೊತೆ ಮಾತನಾಡುತ್ತಿದ್ದ ಮತ್ತು ಊಟ ಮಾಡುತ್ತಿದ್ದ. ದಿಃ 29-06-2013 ರಂದು ಸದರಿಯವರು ತನ್ನ ಕೊನೆಯ ಮೃತ್ಯು ಪತ್ರವನ್ನು ಬರೆದಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿದಾರರ ಸಮಕ್ಷಮ ಆತನೇ ಸಹಿ ಮಾಡಿ ಮೃತ್ಯು ಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಮೃತ್ಯು ಪತ್ರ ಬರೆದು ಕೊಟ್ಟಿರುವ ವಿಚಾರ ನನಗೆ ಗೊತ್ತಿದ್ದರು ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರು ಮಾಡಿರುವ ಉತಾರಗಳಲ್ಲಿ ಚನ್ನಪ್ಪನ ಹೆಸರು ಇರುವುದಿಲ್ಲ. ಸದರಿ ಚನ್ನಪ್ಪ ತೀರಿಕೊಂಡ ನಂತರ ಪಹಣಿಯಲ್ಲಿ ಆತನ ಹೆಸರು ಕಡಿಮೆ ಆಗಿ 1 ಮತ್ತು 2 ನೇ ಪ್ರತಿವಾದಿಗಳ ಹೆಸರು ದಾಖಲಾಗಿರುತ್ತದೆ ಎಂದರೆ ಸರಿಯಲ್ಲ. ( ಸಾಕ್ಷಿ ಮುಂದುವರೆದು ಆಸ್ತಿಯಲ್ಲಿ ಹಿಸ್ಸೇ ಆಗಿಲ್ಲ ಎಂದು ನುಡಿಯುತ್ತಾರೆ. ) ನಿಪಿ. 7 ಮತ್ತು 8 ರಲ್ಲಿ 2 ನೇ ಪ್ರತಿವಾದಿ ಸಂಗಪ್ಪನ ಹೆಸರು ದಾಖಲಾಗಿರುತ್ತದೆ. 2 ನೇ ಪ್ರತಿವಾದಿ ಹೇಗೆ ತನ್ನ ಹೆಸರಿಗೆ ದಾಖಲೆ ಮಾಡಿಕೊಂಡ ಎಂದು ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿಯ ಹೆಸರು ಏಕೆ ದಾಖಲಾಯಿತು ಎಂದು ನಾನು ವಿಚಾರ ಮಾಡಿರುತ್ತೇನೆ.

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಕೆಲವು ದಾಖಲೆಗಳನ್ನು ಪರಿಶೀಲಿಸಲು ಕಾಲಾವಕಾಶ ಕೋರಿರುತ್ತಾರೆ. ಕೋರಿಕೆಯ ಮೇರೆಗೆ ಪಾಟೀ ಸವಾಲು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದಂತೆ ನನ್ನ ಉಖ್ತಲೇಖನಕ್ಕೆ ದಿಃ 09-10-2023 ರಂದು ಮಧ್ಯಾಹ್ನ 12ಃ51 ರಿಂದ 01ಃ06 ಗಂಟೆಯವರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ

ಸಹಿ ಆಗಿದೆ

ಹಿರಿಯ ದಿವಾಣಿ ನ್ಯಾಯಾಧೀಶರು,

ಕುಂದಗೋಳ